ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ –2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಮಂಗಳವಾರ, ದಿನಾಂಕ:17ನೇ ಸೆಪ್ಟೆಂಬರ್, 2024

ಸಂಖ್ಯೆ: 48

2024–25ನೇ ಸಾಲಿಗೆ ಕರ್ನಾಟಕ ವಿಧಾನ ಮಂಡಲದ ಜಂಟಿ ಹಾಗೂ ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ ಮಾನ್ಯ ಶಾಸಕರುಗಳನ್ನು ನಾಮನಿರ್ದೇಶನ ಮಾಡಿ ವಿಧಾನ ಪರಿಷತ್ತಿನಿಂದ ದಿನಾಂಕ:30.08.2024ರಂದು ಲಘು ಪ್ರಕಟಣೆ ಹೊರಡಿಸಲಾಗಿರುತ್ತದೆ.

ಕರ್ನಾಟಕ ವಿಧಾನ ಸಭೆಯಲ್ಲಿ 2024–25ನೇ ಸಾಲಿಗೆ ಸಮಿತಿ ರಚನೆ ಮಾಡದಿರುವುದರಿಂದ, 2024–25ನೇ ಸಾಲಿಗೆ ವಿಧಾನ ಮಂಡಲದ ಜಂಟಿ ಸಮಿತಿಗಳಿಗೆ ಪರಿಷತ್ತಿನಿಂದ ನಾಮನಿರ್ದೇಶನಗೊಂಡಿರುವ ಮಾನ್ಯ ಶಾಸಕರುಗಳು ಸಮಿತಿ ಸಭೆಗಳಿಗೆ ಹಾಜರಾಗಲು ಸಾಧ್ಯವಾಗದೆ ತಾಂತ್ರಿಕ ಬಿಕ್ಕಟ್ಟು ಉಂಟಾಗಿರುವ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಸಭೆಯಿಂದ 2024–25ನೇ ಸಾಲಿನ ಸಮಿತಿಗಳು ರಚನೆಯಾಗುವವರೆಗೂ ಈ ಕೆಳಕಂಡ ಮಾನ್ಯ ಶಾಸಕರುಗಳನ್ನು ತಾತ್ಕಾಲಿಕವಾಗಿ ವಿಧಾನ ಮಂಡಲದ ಜಂಟಿ ಸಮಿತಿಗಳಿಗೆ ನೇಮಕ ಮಾಡಲಾಗಿರುತ್ತದೆ.

ಕರ್ನಾಟಕ ವಿಧಾನ ಸಭೆಯಿಂದ 2024–25ನೇ ಸಾಲಿಗೆ ಸಮಿತಿ ರಚನೆಯಾದ ನಂತರ ದಿನಾಂಕ:30.08.2024ರಂದು ಪರಿಷತ್ತಿನಿಂದ ಹೊರಡಿಸಲಾಗಿರುವ ಲಘು ಪ್ರಕಟಣೆಯು ಯಥಾವತ್ತಾಗಿ ಮುಂದುವರೆಯುತ್ತದೆ ಎಂದು ಈ ಮೂಲಕ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

ಕ್ರ. ಸಂ.	ಹೆಸರು ಶ್ರೀಮತಿ/ಶ್ರೀಯುತರುಗಳಾದ	ಸಮಿತಿಯ ಹೆಸರು
1.	ಡಾ: ಡಿ. ತಿಮ್ಮಯ್ಯ	ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ
2.	ಹೆಚ್.ಪಿ. ಸುಧಾಮ್ ದಾಸ್	ಅಧೀನ ಶಾಸನ ರಚನಾ ಸಮಿತಿ
3.	ಉಮಾಶ್ರೀ	ಸಾರ್ವಜನಿಕ ಉದ್ಯಮಗಳ ಸಮಿತಿ
4.	ಪ್ರದೀಪ್ ಶೆಟ್ಟರ್	ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಮಿತಿ
5.	ಎಸ್.ಎಲ್. ಭೋಜೇಗೌಡ	ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ
6.	ಕೆ. ವಿವೇಕಾನಂದ	ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ

7.	ಬಸನಗೌಡ ಬಾದರ್ಲಿ	ಸಾರ್ವಜನಿಕ ಉದ್ಯಮಗಳ ಸಮಿತಿ
8.	ಡಾ: ಧನಂಜಯ ಸರ್ಜಿ	ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ
9.	ಬಲ್ಕೀಸ್ ಬಾನು	ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ
10.	ಭೀಮರಾವ್ ಬಸವರಾಜ್ ಪಾಟೀಲ್	ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಮಿತಿ

ಕೆ.ಆರ್.ಮಹಾಲಕ್ಷ್ಮಿ
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ

www://kla.kar.nic.in/council/council.htm